
 

ಮೂಲ: **ಸಾಹಿರ್ ಲುಧಿಯಾನ್ವಿ**
ಕನ್ನಡಕ್ಕೆ: **ಎಚ್. ಎಸ್. ಮುಕ್ತಾಯಕ್ಕ**
ಕಲೆ: ಸಂತೋಷ್ ಸಸಿಹಿತ್ಲು

# ನಿರೀಕ್ಷೆ

ಚಂದ್ರ ಮಂಕಾಗಿರುವನು.
ಆಗಸ ಸುಮ್ಮನಿಹುದು.
ನಿದ್ದೆಯ ಮಡಿಲಲ್ಲಿ ಜಗವು ಮೌನವಾಗಿಹುದು.
ದೂರದಲಿ ಹಾಲಿನಂಥ
ಮೋಡಗಳು ಬಾಗಿ,
ಬೆಟ್ಟವನು ಪ್ರೀತಿಸುತ್ತವೆ.
ಈಡೇರದ ಇಚ್ಛೆಗಳನು
ಹೃದಯದಲಿಟ್ಟುಕೊಂಡು,
ನಾನು ನಿನ್ನ ನಿರೀಕ್ಷೆಯನು
ಮಾಡುವೆ.
ಈ ವಸಂತದ ನೆರಳಿನಲಿ
ನೀನು ಬಂದು ಬಿಡು.
ಮತ್ತೆ ಪ್ರೀತಿಗೆ ಹರೆಯ
ಇರುವುದೊ ಇಲ್ಲವೊ.
ಬದುಕು, ನಿನ್ನ, ವಿಫಲ
ಆಸೆಗಳ ಬಗೆಗೆ ನಾಳೆ
ಮತ್ತೆ ಕರುಣೆ
ತೋರುವುದೋ
ಇಲ್ಲವೋ.
ಪ್ರತೀ ದಿನದಂತೆ ಇಂದೂ
ತಾರೆಗಳು, ಮುಂಜಾನೆಯ
ಮಬ್ಬಿನಲಿ ಮಲಗದಿರಲಿ.
ನಿನ್ನ ದುಃಖದಲಿ,
ದಿನವೂ ನಿದ್ದೆಗೆಡುವ
ಕಂಗಳು ಇಂದು,
ಒಂದು ರಾತ್ರಿಯಾದರೂ
ನಿದ್ದೆಯನು ಕಾಣಲಿ.
ಚಂದ್ರ ಮಂಕಾಗಿರುವನು.
ಆಗಸ ಸುಮ್ಮನಿಹುದು.
ನಿದ್ದೆಯ ಮಡಿಲಲ್ಲಿ
ಜಗವು ಮೌನವಾಗಿಹುದು.



Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68